ದಿನಾಂಕಃ 23-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಹೆಚ್ ಎಂ ವಿ ವಕೀಲರಿಂದಃ**

ಈ ದಾವೆಯನ್ನುಹೂಡಿರುವ ಅಶೋಕನಾಯ್ಕನವರ ತಂದೆ ಹೆಸರು ಲಕ್ಷ್ಮನಾಯ್ಕ ಯಾನೆ ಲಚ್ಮನಾಯ್ಕ ಎಂದರೆ ಸರಿ.ಸದರಿ ಲಕ್ಷ್ಮನಾಯ್ಕನ ತಂದೆಯ ಹೆಸರು ದ್ಯಾವ್ಲನಾಯ್ಕ ಎಂದರೆ ಸರಿ. ಸದರಿ ಲಕ್ಷ್ಮನಾಯ್ಕರವರಿಗೆ ಗಿರಿಜಾಬಾಯಿ, ವಾದಿ, ಕಾಮರಾಜನಾಯ್ಕ, ಕನಕದಾಸ ಎನ್ನುವವರು ಮಕ್ಕಳು ಎಂದರೆ ಸರಿ. ಸದರಿ ದ್ಯಾವ್ಲನಾಯ್ಕರವರು ರಾಮಾನಾಯ್ಕರವರ ತಂದೆ ಎಂದರೆ ಸರಿ. ಸದರಿ ರಾಮಾನಾಯ್ಕರವರಿಗೆ ಉಮಾಪತಿನಾಯ್ಕ, ಕೃಷ್ಣನಾಯ್ಕ , ವಿಜಯಬಾಯಿ, ಶಿವನಾಯ್ಕ ಮತ್ತು ನಾನು ಮಕ್ಕಳು ಎಂದರೆ ಸರಿ. ನನ್ನ ಅಣ್ಣನಾದ ಉಮಾಪತಿ ನಾಯ್ಕ ಮೃತಪಟ್ಟಿರುತ್ತಾರೆ ಎಂದರೆ ಸರಿ. ಸದರಿ ಉಮಾಪತಿಯವರಿಗೆ 3 ರಿಂದ 5 ನೇ ಪ್ರತಿವಾದಿಗಳು ಮಕ್ಕಳು ಎಂದರೆ ಸರಿ. ಕೃಷ್ಣನಾಯ್ಕರವರಿಗೆ 6 ನೇ ಪ್ರತಿವಾದಿ ಹೆಂಡತಿ ಎಂದರೆ ಸರಿ. ಈ ಮೇಲೆ ಹೇಳಿದ ಕುಟುಂಬಸ್ಥರು ಅಂದರೆ ನಾವು 1948ರಲ್ಲಿ ಜುಬಾನಿ ಹಿಸ್ಸೆ ಮಾಡಿಕೊಂಡಿರುತ್ತೇವೆ ಎಂದು

ನಮ್ಮ ತಕರಾರಿನಲ್ಲಿ ಉಲ್ಲೇಖಿಸಿರುತ್ತೇವೆ. ಸದರಿ ಜುಬಾನಿ ಹಿಸ್ಸೆಯ ವಿಚಾರದ ಕುರಿತು ತಕರಾರು ಸಲ್ಲಿಸುವ ಸಮಯಕ್ಕೆ ನಮ್ಮ ವಕೀಲರಿಗೆ ತಿಳಿಸಿರುತ್ತೇವೆ. ಸದರಿ ಜುಬಾನಿ ಹಿಸ್ಸೆಯನ್ನು ಬೈರಾಪುರ ಗ್ರಾಮದ ಸರ್ವೆ ನಂ 21 ರಲ್ಲಿನ 3 ಎಕರೆ 24 ಗುಂಟೆ, ಕಬ್ಬಳ ಗ್ರಾಮದ ಸರ್ವೆ ನಂ 40/3ರಲ್ಲಿನ 4 ಎಕರೆ ಜಮೀನನ್ನು ಹಿಸ್ಸೆ ಮಾಡಿಕೊಂಡಿರುತ್ತೇವೆ. 1948ರಲ್ಲಿ ಜುಬಾನಿ ಹಿಸ್ಸೆಯಾದ ಕುರಿತು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಸದರಿ ಜುಬಾನಿ ಹಿಸ್ಸೆಯಾಧಾರದ ಮೇಲೆ ನಮ್ಮ ಹೆಸರಿಗೆ ಖಾತೆ ಬದಲಾವಣೆಯಾದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಹಾಗಾಗಿ ನಾನು ಹೇಳಿದಂತೆ ಯಾವುದೇ ಜುಬಾನಿ ಹಿಸ್ಸೆಯಾಗದೆ ಇದ್ದರು ಸಹ ಸದರಿ ಜುಬಾನಿ ಹಿಸ್ಸೆಯಾಗಿದೆ ಎಂದು ಈ ದಾವೆಗಾಗಿ ಸುಳ್ಳು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ.

ಕಬ್ಬಳ ಗ್ರಾಮದ ಸರ್ವೆ ನಂ 40/3ರಲ್ಲಿನ ಜಮೀನು ವಾದಿಯ ಹೆಸರಿನಲ್ಲಿ ಖಾತೆ ಪಹಣಿ ಇದೆ. ಸದರಿ ಜಮೀನಿನ ಅರ್ಧ ಭಾಗದಲ್ಲಿ ನಾವು ಅನುಭವದಲ್ಲಿದ್ದು ಉಳಿದರ್ಧ ಭಾಗದಲ್ಲಿ ವಾದಿ ಅನುಭವದಲ್ಲಿದ್ದಾರೆ. ಸರ್ವೆ ನಂ 21ರ ಜಮೀನಿನ ಖಾತೆ ವಾದಿಯ ಹೆಸರಿನಲ್ಲಿದೆ. ಸದರಿ ಜಮೀನು ಹಾಲಿ ವಾದಿಯ ಸ್ವಾಧೀನದಲ್ಲಿದೆ. ಸದರಿ ಜಮೀನಿನಲ್ಲಿ ವಾದಿ 7-8 ವರ್ಷಗಳಿಂದ ಅನುಭವದಲ್ಲಿದ್ದಾರೆ. ಸದರಿ ವಿಚಾರವನ್ನು ನಮ್ಮ ತಕರಾರಿನಲ್ಲಿ ಆಗಲಿ ಅಥವಾ ನನ್ನ ಮುಖ್ಯ ವಿಚಾರಣಾ ಪ್ರ.ಪತ್ರದಲ್ಲಾಗಲಿ ಹೇಳಿ ಬರೆಸಿರುವುದಿಲ್ಲ. 1ನೇ ದಾವಾಸ್ತಿಯ 1 ಎಕರೆ ಜಮೀನಿನಲ್ಲಿ ಮತ್ತು 2 ನೇ ದಾವಾಸ್ತಿಯ 10 ಗುಂಟೆ ಜಮೀನಿನಲ್ಲಿ ಪ್ರಸ್ತುತ ನಾವೇ ಅನುಭವದಲ್ಲಿದ್ದೇವೆ.

ಈ ದಾವಾಸ್ತಿಗಳಿಗೆ ಸಂಬಂಧಿಸಿದಂತೆ ಕಂದಾಯ ನ್ಯಾಯಾಲಯಗಳಲ್ಲಿ ಆದ ಪ್ರಕರಣಗಳ ಕುರಿತು ನನಗೆ ಮಾಹಿತಿ ಇದೆ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆ ದಿಃ 15-02-2024ರ ಜಿಲ್ಲಾಧಿಕಾರಿಗಳ ನ್ಯಾಯಾಲಯ ದಾವಣಗೆರೆಯವರು ಮಾಡಿದ ಆದೇಶದ ನಕಲು ಪ್ರತಿಯಾಗಿದ್ದುಸಾಕ್ಷಿ ಸದರಿ ದಾಖಲೆಯನ್ನು ನೋಡಿ ಒಪ್ಪಿದ ಮೇರೆಗೆ ಅದನ್ನು **ನಿಪಿ-17** ಎಂದು ಗುರುತಿಸಲಾಯಿತು. ಸದರಿ ನಿಪಿ-17ರಲ್ಲಿನ ಆದೇಶದಂತೆ 1 ನೇ ದಾವಾಸ್ತಿ ವಾದಿಯ ಅನುಭವದಲ್ಲಿ ಇರುವ ಬಗ್ಗೆ ಉಪವಿಭಾಗಾಧಿಕಾರಿಗಳು ಜಿಲ್ಲಾಧಿಕಾರಿಗಳಿಗೆ ವರದಿ ನೀಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ವರದಿ ನೀಡಿದ್ದರು ಸಹ ಅನುಭವದಲ್ಲಿ ನಾವೇ

ಇದ್ದೇವೆ ಎಂದು ನುಡಿಯುತ್ತಾರೆ. ಸದರಿ ಉಪವಿಭಾಗಾಧಿಕಾರಿಗಳು ಮಾನ್ಯ ಜಿಲ್ಲಾಧಿಕಾರಿಗಳಿಗೆ ನೀಡಿದ ವರದಿಯನ್ನು ಪಡೆಯಲು ನಾವು ಪ್ರಯತ್ನ ಪಟ್ಟರು ಸಹ ಸದರಿ ವರದಿ ನಮಗೆ ದೊರೆಯಲಿಲ್ಲ ಎಂದು ನುಡಿಯುತ್ತಾರೆ. ನಿಪಿ-17ರ ಆದೇಶವನ್ನುಪ್ರಶ್ನಿಸಿ ನಾವು ಯಾವುದೇ ಪುನರ್ ಪರಿಶೀಲನ ಅರ್ಜಿಯನ್ನಾಗಲಿ ಅಥವಾ ರಿಟ್ ಅರ್ಜಿಯನ್ನಾಗಲಿ ದಾಖಲಿಸಿಲ್ಲ. ವಾದಿ 1 ನೇ ದಾವಾಸ್ತಿಯ ಅನುಭವದಲ್ಲಿರುವ ಕಾರಣ ಸದರಿ ಪ್ರಕರಣ ಸಿವಿಲ್ ಸ್ವರೂಪದ್ದಾದ ಕಾರಣ ಸಿವಿಲ್ ನ್ಯಾಯಾಲಯಕ್ಕೆ ಹೋಗಿ ಪರಿಹಾರವನ್ನು ಕಂಡುಕೊಳ್ಳುವಂತೆ ಅದೇಶಿಸಿರುತ್ತಾರೆ ಎಂದರೆ ಸರಿ. ನಾನು ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ವಾದಿ ಗುತ್ತಿಗೆಯಾಧಾರದ ಮೇಲೆ ದಾವಾಸ್ತಿಗಳಲ್ಲಿ ಅನುಭವದಲ್ಲಿರುವ ಕುರಿತು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಸಾಕ್ಷಿ ಮುಂದುವರೆದು ಮೌಖಿಕವಾಗಿ ಗುತ್ತಿಗೆಗೆ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಗುತ್ತಿಗೆಯಾಧಾರದ ಮೇಲೆ ವಾದಿ 1971-72 ರಿಂದ 1991-92ರವರೆಗೆ ಅನುಭವದಲ್ಲಿದ್ದಾರೆ. ನಿಡಿ-7ರಲ್ಲಿ ಸದರಿ ವಾದಿಯ ತಂದೆ ಲಕ್ಷ್ಮನಾಯ್ಕರವರು ಗುತ್ತಿಗೆಯಾಧಾರದ ಮೇಲೆ ದಾವಾಸ್ತಿಯ ಅನುಭವದಲ್ಲಿರುವ ಕುರಿತು ಯಾವುದೇ ಅನುಭವದಲ್ಲಿ ಇಲ್ಲ ಎಂದರೆ ಸರಿ. ವಾದಿಯ ತಂದೆ ಮತ್ತು ನಮ್ಮ ತಂದೆ ಜುಬಾನಿ ಹಿಸ್ಸೆಯಂತೆ ವಿಭಾಗ ಮಾಡಿಕೊಂಡ ಕಾರಣ ಸದರಿ ಗುತ್ತಿಗೆಯ ಅಂಶವನ್ನು ನಿಡಿ-7ರಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಗಳನ್ನು ನಮ್ಮ ತಂದೆಗೆ ಸರ್ಕಾರದಿಂದ ಮಂಜೂರಾತಿಯಾದ ನಂತರ ನಾವು ಜುಬಾನಿ ಹಿಸ್ಸೆ ಮಾಡಿಕೊಂಡಿರುವ ವಿಚಾರ ನನಗೆ ಗೊತ್ತಿದ್ದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ನಿಡಿ-14ರಲ್ಲಿರುವ 1 ನೇ ಪ್ರತಿವಾದಿಯ ಹೇಳಿಕೆಯಲ್ಲಿ ಎಲ್ಲಿಯೂ ಸಹ 1 ನೇ ದಾವಾಸ್ತಿಯಲ್ಲಿ ನಾವು ಅನುಭವದಲ್ಲಿರುವ ಕುರಿತು ನಮೂದು ಇಲ್ಲ ಎಂದರೆ ಸರಿ. ನಾವು 1 ಮತ್ತು 2 ನೇ ದಾವಾಸ್ತಿಗಳಲ್ಲಿ 1992-93ರ ನಂತರ ಅನುಭವದಲ್ಲಿರುತ್ತೇವೆ. ತದ ನಂತರ ವಾದಿ ಸದರಿ ಆಸ್ತಿಗಳಲ್ಲಿ ಯಾವತ್ತಿಗೂ ಅನುಭವದಲ್ಲಿ ಇಲ್ಲ. ಹಾಗಾಗಿ ದಾವಾಸ್ತಿಗಳು ನಮ್ಮ ಮತ್ತು ವಾದಿಯ ಒಟ್ಟು ಕುಟುಂಬದ ಆಸ್ತಿಗಳಾಗಿದ್ದರು ಸಹ ನಾವು ವಾದಿಗೆ ಬರಬೇಕಾಗಿದ್ದ ಹಿಸ್ಸೆಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ನಮ್ಮ ತಂದೆ ಹಾಗೂ ವಾದಿಯ ನಡುವೆಯಾದಂತಹ ಜುಬಾನಿ ಹಿಸ್ಸೆಯಂತೆ ವಾದಿ

ದಾವಾಸ್ತಿಗಳಲ್ಲಿ ಅನುಭವದಲ್ಲಿ ಇದ್ದು ಸದರಿ ವಿಚಾರವನ್ನೆ ಉಪವಿಭಾಗಧಿಕಾರಿಗಳು ಜಿಲ್ಲಾಧಿಕಾರಿಗಳಿಗೆ ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ದಾವಾಸಿತಗಳುವಾದಿ ಮತ್ತು ಅತನ ಸಹೋದರರು ಮಾಡಿಕೊಂಡಿರುವ ಪಾಲುವಿಭಾಗದಂತೆ ವಾದಿಯ ಹಿಸ್ಸೆಗೆಹೋಗಿರುತ್ತದೆ ಎಂದರೆ ಸರಿಯಲ್ಲ. ವಾದಿ ಮತ್ತು ಆತನ ಸಹೋದರರು ವಿಭಾಗ ಮಾಡಿಕೊಂಡ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ. ಹಾಗಾಗಿ ವಾದಿಗಳೇ ದಾವಾಸ್ತಿಗಳ ಮಾಲೀಕರು ಮತ್ತು ಸ್ವಾಧಿನಾನುಭವದಾರರು ಎಂದರೆ ಸರಿಯಲ್ಲ. ವಾದಿಯ ತಂದೆಯ ಹೆಸರು ಪಹಣಿಗಳಲ್ಲಿ ನಮೂದಾಗಿದ್ದು ಸದರಿ ವಿಚಾರದ ಮಾಹಿತಿ ದೊರತೆ ನಂತರ ಅದನ್ನು ರದ್ದುಪಡಿಸಲು ನಾನು ಯಾವುದೇ ಕ್ರಮ ಕೈಗೊಂಡಿಲ್ಲ. ಗ್ರಾಮಸ್ದರು ಉಪವಿಭಾಗಾಧಿಕಾರಿಗಳಿಗೆ ದಾವಾಸ್ತಿಗಳಲ್ಲಿ ವಾದಿಯೇ ಅನುಭವದಲ್ಲಿರುವ ಕುರಿತು ತಿಳಿಸಿದ ಮೇರೆಗೆ ಸದರಿಯವರು ಜಿಲ್ಲಾಧಿಕಾರಿಗಳಿಗೆ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವರದಿಯಲ್ಲಿ ನಾನು ಸದರಿ ದಾವಾಸ್ತಿಗಳಲ್ಲಿ ಅನುಭವದಲ್ಲಿ ಇಲ್ಲ ಎಂದು ಗ್ರಾಮಸ್ಥರು ತಿಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-12 ರ ಆದೇಶದಂತೆ ವಾದಿ ಈ ನ್ಯಾಯಾಲಯಕ್ಕೆ ಈ ದಾವೆಯನ್ನು ಹೂಡಿರುತ್ತಾರೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ, ಹಾಗಾಗಿ ದಾವಾಸ್ತಿಗಳಲ್ಲಿ ವಾದಿಗಳನ್ನು ಹೊರತುಪಡಿಸಿ ನಮಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಹಾಗಾಗಿ ದಾವಾಸ್ತಿಗಳಲ್ಲಿ ವಾದಿಯೇ ಅಡಿಕೆ ಗಿಡಗಳನ್ನು ಹಾಕಿದ್ದರು ಸಹ ಸದರಿ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ನಾವು ಸದರಿ ದಾವಾಸ್ತಿಗಳಲ್ಲಿ ಅಡಿಕೆ ಗಿಡಗಳನ್ನು ಹಾಕಿದ್ದು ಸದರಿ ಆಸ್ತಿಗಳನ್ನು ವಾದಿಗೆ ಗುತ್ತಿತೆಗೆ ಕೊಟ್ಟಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ,**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)** **ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.